**ಅಸಲು ದಾವ ಸಂಖ್ಯೆಃ 91/2020**
**ಪಿ.ಡಬ್ಲೂ -1**

ದಿಃ 29.10.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಪಾಟೀ ಸವಾಲು ಪ್ರತಿವಾದಿ ನಂಬರ 2 ರವರ ಪರವಾಗಿ ಶ್ರೀ ಬಿ ಎಸ್ ಕೆ ರವರಿಂದಃ-**

1. ನನ್ನ ಹಿರಿಯರ ಆಸ್ತಿ ಬೇಕು ಎಂದು ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. ಈ ದಾವೆಯನ್ನು ಮನೆಯ ಕುರಿತಾಗಿ ಮಾತ್ರ ಸಲ್ಲಿಸಿರುತ್ತೇನೆ. ದಾವಾ ಮನೆ ನಂಬರ 215 ಇರುತ್ತದೆ. ಸದರಿ ದಾವಾ ಮನೆ ನಂಬರ 215 ರಲ್ಲಿ ಎ ಮತ್ತು ಬಿ ಎಂದು ಇರುತ್ತದೆ. ನಿಶಾನೆ ಪಿ 1 ರಲ್ಲಿ ಪ್ರತಿವಾದಿ ನಂಬರ 1 ರವರ ಹೆಸರು ಮಾತ್ರ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಶಾನೆ ಪಿ 1 ರಲ್ಲಿ ಆಸ್ತಿಯ ಉದ್ದ ಅಗಲ 21ftX 13ft ಎಂದು ತೋರಿಸಲಾಗಿದೆ ಎಂದರೆ ಸರಿ. ಹಂಗರಗಾ ಗ್ರಾಮದಲ್ಲಿ ಆರ್ ಎಸ ನಂಬರ 225 ಸರ್ವೇ ನಂಬರ ಹೊಂದಿರುವ ಒಂದು ಹೊಲ ನನ್ನ, ಪ್ರತಿವಾದಿಯ ಹಾಗೂ ನನ್ನ ಚಿಕ್ಕಪ್ಪಂದಿರ ನಡುವೆ ಇದೆ ಎಂದರೆಸರಿ. ಸದರಿ ಜಮೀನಿನ ಒಟ್ಟು ಕ್ಷೇತ್ರ 3 ಎಕರೆ 10 ಗುಂಟೆ ಇರುತ್ತದೆ. ಸದರಿ ಆಸ್ತಿಯಲ್ಲಿ ಒಟ್ಟು 4 ಹಿಸ್ಸೆಗಳಾಗಬೇಕಾಗಿರುತ್ತದೆ. ಸದರಿ ಜಮೀನಿನಲ್ಲಿ ನನಗೆ ಮತ್ತು ಪ್ರತಿವಾದಿ ರವರಿಗೆ ಸೇರಿ 20 ಗುಂಟೆ ಬರುತ್ತದೆ. ಸದರಿ ನಮ್ಮ ಪಾಲಿನ ಆಸ್ತಿಯನ್ನು ನಾನು ಮತ್ತು ಪ್ರತಿವಾದಿ ನಂಬರ 1 ರವರು ಸೇರಿ ಸಾಗುವಳಿ ಮಾಡುತ್ತಾ ಬಂದಿರುತ್ತೇವೆ. ನನ್ನ ತಂದೆಯ ಸಹೋದರರು ನನ್ನ ತಂದೆಯನ್ನು ಸೇರಿ 4 ಜನ ಇರುತ್ತಾರೆ ಅವರುಗಳ ಪೈಕಿ ನನ್ನ ತಂದೆಯ ಸಹೋದರನಾದ ಈರಪ್ಪಾ ಯಲ್ಲಪ್ಪಾ ನಾಯಕ ರವರು ಮೃತರಾಗಿರುತ್ತಾರೆ. ಸದರಿಯವರಿಗೆ ಮದುವೆಯಾಗಿತ್ತು ಆದರೆ ಸದರಿಯವರಿಗೆ ಮಕ್ಕಳಿರಲಿಲ್ಲ ಹಾಗೂ ಅವರ ಹೆಂಡತಿ ಸಹ ಮೃತಳಾಗಿರುತ್ತಾಳೆ. ಹಾಗಾಗಿ ಸದರಿ ಹೊಲ ಸರ್ವೇ ನಂಬರ 225 ರಲ್ಲಿ 3 ಪಾಲು ಆಗಬೇಕು ಎಂದರೆ ಸರಿ. ಮೃತ ಈರಪ್ಪಾ ರವರಿಗೆ ಮಕ್ಕಳು ಹೆಂಡತಿ ಇಲ್ಲದೇ ಇರುವುದರಿಂದ ನಾವು ಮತ್ತು ನನ್ನ

ಇಬ್ಬರೂ ಚಿಕ್ಕಪ್ಪಂದಿರು ಸೇರಿ ಸದರಿ ಹೊಲವನ್ನು ಸಾಗುವಳಿ ಮಾಡುತ್ತಾ ಬಂದಿರುತ್ತೇವೆ.

2. ಸದರಿ ಸರ್ವೇ ನಂಬರ 225 ರ ಉತಾರವನ್ನು ನಾನು ನೋಡಿರುತ್ತೇನೆ. ಈ ದಾವೆಯಲ್ಲಿ ಸರ್ವೆ ನಂಬರ 225 ನ್ನು ದಾವಾ ಆಸ್ತಿಯಾಗಿ ಸೇರಿಸಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಸದರಿ ಹೊಲದ ಜಮೀನನ್ನು ಸೇರಿಸಲು ನನಗೆ ಯಾವುದೇ ತೊಂದರೆ ಇಲ್ಲ. ದಾವಾ ಆಸ್ತಿಯಲ್ಲಿರುವ ಇರುವ ಮನೆಯ ಉದ್ದ ಆಗಲ 50ftX12ft ಹಾಗೂ ಖಾಲಿಗದ ಉದ್ದ ಅಗಲ 50ftX20ft ಇರುತ್ತದೆ. ದಾವಾ ಆಸ್ತಿಯಲ್ಲಿ ನನ್ನ ಚಿಕ್ಕಪ್ಪಂದಿರಿಗೆ  ಖಾಲಿ ಜಾಗದಲ್ಲಿ ನಮ್ಮಷ್ಟೇ ಉದ್ದ ಅಗಲದ ಜಾಗ ಕಬ್ಜಾದಲ್ಲಿರುತ್ತದೆ ಆದರೆ ಮನೆ ಜಾಗದಲ್ಲಿ ನಮಗೆ 2ft ಹೆಚ್ಚಿನ ಜಾಗ ಕಬ್ಜಾದಲ್ಲಿರುತ್ತದೆ.  ನಮಗೆ ಮತ್ತು ಪ್ರತಿವಾದಿ ನಂಬರ 1 ರವರ ಕಬ್ಜಾದಲ್ಲಿರುವ 2ft ಹೆಚ್ಚಿ ನ ಜಾಗ ಹಳೆಯ ಮನೆ ಇರುವ ಸಮಯದಿಂದಲೂ ಇತ್ತು.

3. ನನ್ನ ಚಿಕ್ಕಪ್ಪನಾದ ಕಲ್ಲಪ್ಪಾ ಯುಲ್ಲಪ್ಪಾ ನಾಯಕ ರವರು ಮೃತರಾಗಿರುತ್ತಾರೆ ಅವರ ವಾರಸುದಾರರು ಇರುತ್ತಾರೆ. ನನ್ನ ಮತ್ತೊಬ್ಬ  ಚಿಕ್ಕಪ್ಪನಾದ ಭರಮಾ ಯಲ್ಲಪ್ಪಾ ನಾಯಕ ರವರು ಜೀವಂತ ಇರುತ್ತಾರೆ. ನಮ್ಮ  ಚಿಕ್ಕಪ್ಪಂದಿರು ಹಾಗೂ ನಮ್ಮ ನಡುವೆ ವಾಂಟನಿಯಾಗಿರುತ್ತದೆ. ವಾಂಟನಿಯಾದ ಪ್ರಕಾರ ನಾವು ಮತ್ತು ನಮ್ಮ ಚಿಕ್ಕಪ್ಪಂದಿರು ಅವರವರ ಪಾಲಿನ ಆಸ್ತಿ ಕಬ್ಜಾದಲ್ಲಿರುತ್ತೇವೆ.  ನನ್ನ ತಂದೆ ಮೃತರಾಗಿರುತ್ತಾರೆ ಆದರೆ ನನ್ನ ತಾಯಿ ಶ್ರೀಮತಿ ಹವಲವ್ವಾ ನಾಗಪ್ಪಾ ನಾಯಕ ರವರು ಜೀವಂತ ಇರುತ್ತಾರೆ. ನನ್ನ ತಂದೆಗೆ ನಾನು ಮತ್ತು ಪ್ರತಿವಾದಿ ನಂಬರ 1 ಗಂಡುಮಕ್ಕಳಾಗಿರುತ್ತೇವೆ ಹಾಗೂ ರೇಣುಕಾ, ಸೇವಂತಾ ಹಾಗೂ ಮಾಲು ಎಂಬ 3 ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ 3 ಜನ ಸಹೋದರಿಯರನ್ನು ಮದುವೆ ಮಾಡಿಕೊಟ್ಟಿರುವುದರಿಂದ ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿಸಿಲ್ಲ. ದಾವಾ

ಆಸ್ತಿ ನನ್ನ ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ನನ್ನ ತಾಯಿ ಹಾಗೂ ನನ್ನ ಸಹೋದರಿಯರ ಪಕ್ಷಗಾರರ ಅವಶ್ಯಕ ಪಕ್ಷಗಾರರು ಎಂದರೆ ಸರಿಯಲ್ಲ. ನನ್ನ ದಾವಾ ಪತ್ರದಲ್ಲಿ ಹೇಳಿರುವ ವಂಶಾವಳಿಯಲ್ಲಿ ನನ್ನ ಸಹೋದರಿಯರ ಹೆಸರನ್ನು ತೋರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿ ಹಾಗೂ ಹೊಲದಲ್ಲಿ ನನ್ನ ಅಕ್ಕತಂಗಿಯರಿಗೆ ಹಾಗೂ ನನ್ನ ತಾಯಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿಸಿಲ್ಲ ಎಂದರೆ ಸರಿಯಲ್ಲ.

4. ನಾನು 2011 ರಿಂದ 2014 ರ ವರಗೆಗೆ ಹಂಗರಗಾ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಎಸ್ ಡಿ ಎಂ ಸಿ ಸದಸ್ಯನಾಗಿದ್ದೆ ಎಂದರೆ ಸರಿಯಲ್ಲ. ದಿನಾಂಕ 29.10.2011 ರಂದು ನಾನು ಸದರಿ ಎಸ್ ಡಿ ಎಂ ಸಿ ಯ ಅಧ್ಯಕ್ಷನಾದೆ ಎಂದರೆ ಸರಿಯಲ್ಲ. ಎಸ್ ಡಿ ಎಂ ಸಿ ಕಮಿಟಿಯ ವ್ಯವಹಾರಗಳು ಕಮಿಟಿಯ ಅಧ್ಯಕ್ಷರು ಹಾಗೂ ಶಾಲೆಯ ಮುಖ್ಯೊಪಾಧ್ಯಯರುಗಳ ಸಹಯೋಗದೊಂದಿಗೆ ನಡೆಯುತ್ತವೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 23.11.2011 ರಂದು ನಾನು ಎಸ್ ಡಿ ಎಂ ಸಿ ಅಧ್ಯಕ್ಷನಿದ್ದಾಗ ಠರಾವ ನಂಬರ 4 ರಂತೆ ಶಾಲೆಗೆ ಸುಣ್ಣಬಣ್ಣ ಹಚ್ಚಲು ಹೆಚ್ಚಿನ ಅನುದಾನ ಬೇಕು ಎಂಬ ಕುರಿತಾಗಿ ಠರಾವ ಆಗಿತ್ತು ಎಂದರೆ ನಾನು ಎಸ್ ಡಿ ಎಂ ಸಿ ಯ ಅಧ್ಯಕ್ಷನಾಗಿರಲಿಲ್ಲ ಹಾಗೂ ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ. ಸದರಿ ಠರಾವಿನನ್ವಯ ಅದೇ ದಿನ 23.11.2011 ಖರ್ಚು ವೆಚ್ಚನ ತಪಶೀಲನ್ನು ಬರೆದು ಅದಕ್ಕೆ ನಾನು ಅಧ್ಯಕ್ಷನಾಗಿ ಸಹಿ ಮಾಡಿರುತ್ತೇನೆ ಹಾಗೂ ಅದಕ್ಕೆ ಮುಖ್ಯೋಪಾಧ್ಯಾಯರು ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅವಧಿಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾಗಿ ಶ್ರೀ ಎಚ್ ಎಸ್ ಭಜಂತ್ರಿ ರವರು ಇದ್ದಾರು ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ಶಾಲೆಯಲ್ಲಿ ಸದರಿ ಅವಧಿಯಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷ ಹಾಗೂ

ಉಪಾಧ್ಯಕ್ಷ ಇದ್ದೂ ನಾನು ಠರಾವುಗಳಿಗೆ ಹಾಗೂ ಖರ್ಚು ವೆಚ್ಚ ಪಾವತಿಗಳಿಗೆ ಪಿ ಎನ್ ನಾಯಕ ಎಂದು ಇಂಗ್ಲೀಷನಲ್ಲಿ ಸಹಿ ಮಾಡಿದ್ದರು ಸಹ ಈಗ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಈಗಿರುವ ದಾವಾ ಮನೆಯನ್ನು ಕಟ್ಟಿ ಅಂದಾಜು 4 ವರ್ಷ ಆಗಿರುತ್ತದೆ. ಈ ದಾವಾ ಮನೆಯನ್ನು ಕಟ್ಟುವುದಕ್ಕಿಂತ ಮೊದಲು ನಾನು ಮತ್ತು ಪ್ರತಿವಾದಿ ನಂಬರ 1 ಹಳೆಯ ಮನೆಯಲ್ಲಿ ಇಬ್ಬರೂ ಕೂಡಿ ಇರುತ್ತಿದ್ದೇವು ಎಂದರೆ ಸರಿ. ಸದರಿ ಹಳೆಯ ಮನೆಯಲ್ಲಿ ನಾವು ಒಟ್ಟಾಗಿ ಇದ್ದಾಗ ನನಗೆ ಮತ್ತು ಪ್ರತಿವಾದಿ ನಂಬರ 1 ರವರೊಂದಿಗೆ ಜಗಳ ಹಾಗೂ ಹೊಡೆದಾಟ ಆಗಿದ್ದು ಅದು ಪೊಲೀಸ ಠಾಣೆ ಮೆಟ್ಟಿಲನ್ನು ಹತ್ತಿತ್ತು ಎಂದರೆ ಸರಿಯಲ್ಲ. ದಿನಾಂಕ 20.10.2016 ರಂದು ನನ್ನ ಮತ್ತು ಪ್ರತಿವಾದಿ ನಂಬರ 1 ರವರ ನಡುವೆ ನಡೆದಿದ್ದ ಜಗಳ ಹಾಗೂ ಮನಸ್ತಾಪದ ಶಮನಕ್ಕಾಗಿ ಶ್ರೀ ಕಲಮೇಶ್ವರ ದೇವರ ಗುಡಿಯಲ್ಲಿ ಹಿರಿಯರ ಸಮಕ್ಷಮ ಪಂಚಾಯತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪಂಚಾಯತಿಯಲ್ಲಿ ಹಳೆಯ ಮನೆಯ ಜಾಗದ ಒಟ್ಟು ಮೌಲ್ಯವನ್ನು ಮಾಡಿ ಅದರಲ್ಲಿ ಒಟ್ಟು ಮೌಲ್ಯದ ಅರ್ಧ ಭಾಗವಾದ ರೂ 75000/- ಮೌಲ್ಯದ ಜಾಗವನ್ನು ನನ್ನ ಪಾಲಿಗೆ ಹಾಗೂ ಉಳಿದ ರೂ 75000/- ಮೌಲ್ಯದ ಜಾಗವನ್ನು ಪ್ರತಿವಾದಿ ನಂಬರ 1 ರವರ ಪಾಲಿಗೆ ಪಂಚರವರು ಮಾಡಿ ತೀರ್ಮಾನಿಸಿದ್ದರು ಎಂದರೆ ಸರಿಯಲ್ಲ. ಸದರಿ ಪಂಚಾಯತಿಯಲ್ಲಿ ಹಳೆಯ ಮನೆಯ ಹಂಚು ಮತ್ತು ಕಟ್ಟಿಗೆ ಸಾಮಾನುಗಳನ್ನು ನಾನು ಮತ್ತು ಪ್ರತಿವಾದಿ ನಂಬರ 1 ರವರು ಸಮಾನವಾಗಿ ಹಂಚಿಕೊಳ್ಳಬೇಕು ಎಂದು ತೀರ್ಮಾನವಾಗಿತ್ತು ಎಂದರೆ ಸರಿಯಲ್ಲ. ಸದರಿ ಪಂಚಾಯತಿಯ ಅನ್ವಯ ಮೋಜನಿ ಮಾಡಿದಾಗ ಹಳೆಯ ಮನೆಯ ಜಾಗದ ಉದ್ದ 38ftX12ft ಅಳತೆ ಮಾಡಲಾಗಿದ್ದು ಅದು ಪಂಚಾಯತಿ ಕರಾರು ಪತ್ರದಲ್ಲಿ ಉಲ್ಲೇಖವಿದೆ ಎಂದರೆ ಸರಿಯಲ್ಲ.

ಸದರಿ ಪಂಚಾಯತಿ ಕಮಿಟಿಯಲ್ಲಿ 9 ಜನ ಪಂಚರು ಇದ್ದರೂ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಅಂದಿನ ಪಂಚಾಯತಿ ಮೆಂಬರ್ ಆಗಿದ್ದ ಗೋಪಾಲ ಚೂಡಪ್ಪಾ ಗೋಡಸೆ ರವರು ಸಭೆಯಲ್ಲಿದ್ದರು ಎಂದರೆ ಸರಿಯಲ್ಲ. ಸದರಿಯವರು ಅಂದಿನ ಗ್ರಾಮಪಂಚಾಯತಿ ಮೆಂಬರ್ ಆಗಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ದಿಲೀಪ ಪರಶುರಾಮ ಕಾಂಬಳೆ ರವರು ಜಿಲ್ಲಾ ಪಂಚಾಯತ ಮಾಜಿ ಸದಸ್ಯರು ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪಂಚಾಯತಿಯಲ್ಲಿ ಆದ ತೀರ್ಮಾನದ ಕರಾರಿರನ್ವಯ ನನ್ನ ಪಾಲಿನ 75000/- ಹಣವನ್ನು ಪಡೆದು ಸದರಿ ಕರಾರಿರನ್ವಯ ನಾನು ನನ್ನ ಪಾಲನ್ನು ಬಿಟ್ಟು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಕರಾರಿಗೆ ನಾನು ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಶಾಲೆ ಠರಾವಿನಲ್ಲಿ ಹಾಕಿದ ಸಹಿ ಹಾಗೂ ವಾಂಟನಿ ಪತ್ರಕ್ಕೆ ಹಾಕಿದ ಸಹಿಗಳು ಎರಡು ಇಂಗ್ಲೀಷನಲ್ಲಿದ್ದು ಅವುಗಳು ನನ್ನ ಸಹಿಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ವಾಂಟನಿ ಪತ್ರ ಹಾಗೂ ಶಾಲಾ ಠರಾವುಗಳಿಗೆ ಸಹಿ ಹಾಕಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪಾಲನ್ನು ಹಣ ಪಡೆದು ಬಿಟ್ಟ ನಂತರ ಪ್ರತಿವಾದಿ ನಂಬರ 1 ರವರು ಪ್ರತಿವಾದಿ ನಂಬರ 2 ರಿಂದ 8 ಲಕ್ಷ ಸಾಲವನ್ನು ಪಡೆದು ದಾವಾ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾಲವನ್ನು ಪಡೆದು ಪ್ರತಿವಾದಿ ನಂಬರ 1 ರವರು 20 ವರ್ಷದ ಅವಧಿಗೆ ಪ್ರತಿವಾದಿ ನಂಬರ 2 ಸೊಸೈಟಿಗೆ ದಾವಾ ಮನೆಯನ್ನು ಲೀಸ್ ಆಧಾರದ ಮೇಲೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ 2 ಸೊಸೈಟಿರ ರವರು ಮೊದಲನೇ ಮಹಡಿಯಲ್ಲಿ ಹಾಗೂ ಪ್ರತಿವಾದಿ ನಂಬರ 1 ರವರು ನೆಲಮಹಡಿಯಲ್ಲಿ ವಾಸವಿರುತ್ತಾರೆ ಎಂದರೆ ನೆಲಮಹಡಿಯಲ್ಲಿ ನಾನು ಮತ್ತು ಪ್ರತಿವಾದಿ ನಂಬರ 1 ರವರು ಸೇರಿ ವಾಸವಾಗಿರುತ್ತೇವೆ ಹಾಗೂ 1 ನೇ ಮಹಡಿಯಲ್ಲಿ ಪ್ರತಿವಾದಿ ನಂಬರ 2 ರವರು ಇರುತ್ತಾರೆ. ನೆಲಮಹಡಿಯಲ್ಲಿರುವ ನಿಶಾನೆ ಪಿ 6 ರಲ್ಲಿ ಕಾಣುವ 10ft x10ft ರೂಮನ್ನು ಚಲವಟಕರ್

ಗವಳಿ ಎನ್ನುವವರಿಗೆ ಬಾಡಿಗೆ ನೀಡಲಾಗಿದೆ ಎಂದರೆ ನಾವಿಬ್ಬರೂ ಸೇರಿ ಬಾಡಿಗೆ ನೀಡಿದ್ದೇವೆ.

ಪ್ರಶ್ನೆಃ ಸದರಿ ನೆಲಮಹಡಿಯಲ್ಲಿರುವ 10x10 ರೂಮನ್ನು ಚಲವಟಗರ ಗವಳಿ ರವರಿಗೆ ಎಷ್ಟು ಬಾಡಿಗೆ ಹಣಕ್ಕೆ ಬಾಡಿಗೆ ನೀಡಲಾಯಿತು ?

ಉತ್ತರಃ ಸದರಿ ರೂಂಮನ್ನು ಪ್ರತಿವಾದಿ ನಂಬರ 1 ರವರೇ ಬಾಡಿಗೆಗೆ ಕೊಟ್ಟಿರುತ್ತಾರೆ.

5. ನಿಶಾನೆ ಪಿ 6 ರಲ್ಲಿ ಕಾಣುವ ನೆಲಮಡಿಯಲ್ಲಿ ಶೆಟರ್ಸ ಹೊಂದಿರುವ ಪಕ್ಕದಿಂದ ಮನೆಯ ಜಾಗದ ಕೊನೆವರಗೆ 3 ft ಜಾಗದ ಪ್ಯಾಸೇಜ ಇರುತ್ತದೆ ಎಂದರೆ ಸರಿ. ಸದರಿ ಪ್ಯಾಸೇಜನ್ನು ಹೊರತುಪಡಿಸಿ ಮನೆಯ ಅಗಲ 9ft ಇರುತ್ತದೆ ಎಂದರೆ ಸರಿ. ಪ್ಯಾಸೇಜ್‌ನ ಜಾಗ ಹಾಗೂ ನೆಲಮಹಡಿಯಲ್ಲಿರುವ ರೂಮ್ ನ ಜಾಗವನ್ನು ಕಳೆದಲ್ಲಿ ಮನೆಯ ಜಾಗ ನೆಲಮಹಡಿಯಲ್ಲಿ ಕೇವಲ 16ft X9ft ಮಾತ್ರ ಉಳಿಯುತ್ತದೆ ಎಂದರೆ 40ftx9ft ಉಳಿಯುತ್ತದೆ. ಸದರಿ ನೆಲಮಹಡಿಯಲ್ಲಿರುವ 10ft x10ft ರೂಂಮನ ಜಾಗವನ್ನು ಬಿಟ್ಟು ನೆಲಮಹಡಿಯಲ್ಲಿ ಮನೆಯ ಭಾಗದಲ್ಲಿ 2 ರೂಮ ಮಾತ್ರ ಇರುತ್ತದೆ ಎಂದರೆ 2 ರೂಮ ಮತ್ತು 1 ಮೆಟ್ಟಿಲು ಜಾಗ ಇರುತ್ತದೆ. ಸದರಿ 2 ರೂಮನಲ್ಲಿ ಪ್ರತಿವಾದಿ ನಂಬರ 1 ರವರು 1 ರೂಮಿನಲ್ಲಿ ವಾಸವಿದ್ದು ಇನ್ನೊಂದು ರೂಮನ್ನು ಅವರು ಅಡುಗೆ ಕೋಣೆಯಾಗಿ ಬಳಸುತ್ತಿದ್ದಾರೆ ಎಂದರೆ ನಾನು ಮತ್ತು ಪ್ರತಿವಾದಿ ನಂಬರ 1 ರವರು ಒಟ್ಟಾಗಿ ವಾಸವಾಗಿದ್ದೇವೆ. ಪ್ರತಿವಾದಿ ನಂಬರ 1 ರವರಿಗೆ 5 ಹೆಣ್ಣು ಹಾಗೂ 1 ಗಂಡು ಮಗು ಇರುತ್ತಾರೆ. ಸದರಿ 10ft x10ft ರೂಮನ ಹಿಂದಿರುವ 2 ರೂಮಿನಲ್ಲಿ ಪ್ರತಿವಾದಿ ನಂಬರ 1 ರವರು, ಅವರ 2 ಅವಿವಾಹಿತ ಹೆಣ್ಣು ಮಕ್ಕಳು ಒಂದು ಗಂಡು ಮಗ, ತಾಯಿ ಹಾಗೂ ಹೆಂಡತಿ ಇರುತ್ತಾರೆ ಎಂದರೆ ನಾನು ಸಹ ವಾಸವಾಗಿರುತ್ತೇನೆ. ನನಗೆ 2 ಜನ ಗಂಡು ಮಕ್ಕಳುದ 1 ಹೆಣ್ಣು ಮಗಳು ಹಾಗೂ ಹೆಂಡತಿ ಇರುತ್ತಾರೆ. ಹಂಗರಗಾ ಜನತಾ ಕಾಲನಿಯಲ್ಲಿ ನನ್ನ ಹೆಂಡತಿಯ ಹೆಸರಿನಲ್ಲಿ ಒಂದು ಮನೆ

ಇರುತ್ತದೆ ಅದನ್ನು ನಾವು ಸ್ವತಃ ಖರೀದಿ ಮಾಡಿರುತ್ತೇವೆ. ಸದರಿ ಮನೆ ಸರ್ಕಾರದಿಂದ ನನ್ನ ಹೆಂಡತಿಗೆ ಮಂಜೂರಾದ ಮನೆ ಅಲ್ಲ. ನಾನು ಸದರಿ ಜನತಾ ಪ್ಲಾಟನಲ್ಲಿರುವ ಮನೆಯಲ್ಲಿ ಹಾಗೂ ದಾವಾ ಮನೆಯಲ್ಲಿ ಎರಡರಲ್ಲಿಯೂ ವಾಸವಾಗಿರುತ್ತೇನೆ. ಅಡಿಗೆಯನ್ನು ಹಬ್ಬ ಹುಣ್ಣಿಮೆ ಇರುವ ಸಮಯದಲ್ಲಿ ದಾವಾ ಮನೆಯಲ್ಲಿ ಮಾಡುತ್ತೇವೆ ಹಾಗೂ ಜನತಾ ಪ್ಲಾಟನಲ್ಲಿ ಉಳಿದ ದಿನ ಮಾಡುತ್ತೇವೆ. ನಾನು ನನ್ನ ಮತ್ತು ಪ್ರತಿವಾದಿ ನಂಬರ 1 ರವರ ನಡುವೆ ದಾವಾ ಆಸ್ತಿಯ ಕುರಿತಾಗಿ ವಾಂಟನಿಯಾಗಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಮನೆ ಪ್ರತಿವಾದಿ ನಂಬರ 1 ರವರ ಹಿಸ್ಸಾದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಜಾಗ ತನ್ನ ಪಾಲಿಗೆ ಬಂದ ನಂತರ ಪ್ರತಿವಾದಿ ನಂಬರ 1 ರವರು 2 ರವರಿಂದ ಸಾಲ ಪಡೆದು ಅಲ್ಲಿ ದಾವಾ ಮನೆಯನ್ನು ಒಬ್ಬರೇ ಕಟ್ಟಿರುತ್ತಾರೆ ಹಾಗೂ ಸದರಿ ಸಲಾದ ಹಣವನ್ನು ಪ್ರತಿವಾದಿ ನಂಬರ 2 ರವರು ಬಾಡಿಗೆ ಹಣದಲ್ಲಿ ವಜಾ ಮಾಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಕುರಿತಾಗಿ ವಿಭಾಗ ಕರಾರು ಆಗಿದ್ದರೂ ಸಹ ಹಾಗೂ ಅದು ಪ್ರತಿವಾದಿ ನಂಬರ 1 ರವರಿಗೆ ಸೇರಿದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ಸೃಷ್ಟಿಸಿ ದಾವೆಗೆ ಅನುಕೂಲವಾಗುವ ರೀತಿಯಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**